ದಿನಾಂಕ : **27-11-2018** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಫ್. ಎ .ಎನ್ ಪ್ರತಿವಾದಿ ಪರ ವಕೀಲರಿಂದಃ

ನಾನು ಖಾಯಂ ಬೆವಿನಕೊಪ್ಪ ಗ್ರಾಮದಲ್ಲಿ ವಾಸವಿರುತ್ತೇನೆ. ನಾನು ಖಾಯಂ ಬೆವಿನಕೊಪ್ಪ ಗ್ರಾಮದಲ್ಲಿ ವಾಸ ಇದ್ದೇನೆ ಅಂತಾ ತೊರಿಸಲು ಆಧಾರ ಕಾರ್ಡ , ಮತದಾರರ ಗುರುತಿನ ಚೀಟಿ ಮತ್ತು ರೇಶನ್ ಕಾರ್ಡ ಹಾಜರು ಪಡಿಸಿಲ್ಲ. ಸಾಕ್ಷಿ ಸ್ವತಂ ಹೇಳುವುದೇನೆಂದರೆ ಹಾಲಿ ಬೈಲಹೊಂಗಲನಲ್ಲಿ ವಾಸ ಇದ್ದೇನೆ ಅಂತಾ ಹೇಳುತ್ತಾರೆ. 2002 ರಲ್ಲಿ ಬೇವಿನಕೊಪ್ಪ ಗ್ರಾಮದಿಂದ ಬೈಲಹೊಂಗಲಗೆ ದಾಖಲಾತಿಗಳನ್ನು ವರ್ಗಾವಣೆ ಮಾಡಿಕೊಂಡಿದ್ದೇನೆ. 2002 ರಿಂದ ಬೈಲಹೊಂಗಲನಲ್ಲಿ ವಾಸ ಅದಕ್ಕು ಮೊದಲು ಬೆವಿನಕೊಪ್ಪ ಗ್ರಾಮದಲ್ಲಿ ವಾಸ ಇದ್ದೆ ಅಂತಾ ನನ್ನ ವಾದ ಪತ್ರದಲ್ಲಿ ನಾನು ಹೇಳಿರುತ್ತೇನೆ . ಅದೇ ರೀತಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬೇವಿನಕೊಪ್ಪ ಗ್ರಾಮದಿಂದ ಬೈಲಹೊಂಗಲಗೆ ದಾಖಲಾತಿಗಳನ್ನು ವರ್ಗಾವಣೆ ಮಾಡಿಕೊಂಡ ವಿಷಯ ಹೇಳಿಲ್ಲ. 2002 ರಲ್ಲಿ ನಾನು ಬೇವಿನಕೊಪ್ಪ ಗ್ರಾಮದಲ್ಲಿ ಇದ್ದೆ ಅಂತಾ ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಹೌದು.

ಈ ದಾವೆ ಹೂಡುವ ಕಾಲಕ್ಕೆ ನಾನು ಬೈಲಹೊಂಗಲನಲ್ಲಿ ಇದ್ದೆ. ಈ ದಾವೆ ತಯಾರು ಮಾಡುವ ಕಾಲಕ್ಕೆ ನನ್ನ ವಾದ ಪತ್ರದಲ್ಲಿ ನಾನು ಬೈಲಹೊಂಗಲ ತಾಲೂಕಿನ ಬೇವಿನಕೊಪ್ಪ ಗ್ರಾಮದಲ್ಲಿ ಖಾಯಂ ರಹವಾಸಿಯಾಗಿದ್ದೆ ಅಂತಾ ಬರೆಸಿದ್ದೇನೆ. ನಾನು ಯಾವ ಕಾಲಕ್ಕೂ ಬೇವಿನಕೊಪ್ಪದಲ್ಲಿ ವಾಸ ಇಲ್ಲ ಎಂದರೆ ಸರಿಯಲ್ಲ. ನಾನು ಬೈಲಹೊಂಗಲ ನಗರದ ದೇವಲಾಪೂರ ನಗರದ ಆಶ್ರಯ ಕಾಲನಿದಲ್ಲಿ ವಾಸ ಇದ್ದೇನೆ ಎಂದರೆ ಸಾಕ್ಷಿ 2002 ರಿಂದ ನಾನು ಆಶ್ರಯ ಕಾಲನಿಯಲ್ಲಿ ವಾಸ ಇದ್ದೇನೆ ಎಂದು ಹೇಳುತ್ತಾರೆ. 2002 ಕ್ಕಿಂತ ಮೊದಲಿನಿಂದಲೂ ನಾನು

ಬೈಲಹೊಂಗಲ ನಗರದ ದೇವಲಾಪೂರ ನಗರದ ಆಶ್ರಯ ಕಾಲನಿದಲ್ಲಿ ವಾಸ ಇದ್ದೇನೆ ಎಂದರೆ ಸುಳ್ಳು.

ಈ ದಾವೆ ಹೂಡುವ ಮೊದಲು ಪ್ರತಿವಾದಿಯರ ವಿರುದ್ಧ **OS No**. 15/2009 ದಾವೆ ಹೂಡಿದ್ದೆ ಎಂದರೆ ಹೌದು.

ಈ ಹಂತದಲ್ಲಿ ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ

(ಚೈತ್ರಾ ಎ. ಎಮ್.)
ಪ್ರ ದ ನ್ಯಾ ದಂ, ಬೈಲಹೊಂಗಲ